# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1095

ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್
(ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 25-07-2024

ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲಾ ಪೊಲೀಸ್ ಕಚೇರಿಯ ಆಯ್ದು ಶಾಖೆಯಲ್ಲಿ ಕಡತಗಳು ನಾಪತ್ತೆ ಹಾಗೂ ದಾಖಲೆಗಳ ನಾಶಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿಜಯಪುರ ಜಿಲ್ಲಾ ಪೊಲೀಸ್ ಕಚೇರಿಯ ಸಿಬ್ಬಂದಿ-3 ಮತ್ತು 6 (ಡಿಇ) ಶಾಖೆಯಲ್ಲಿ ಶ್ರೀ ಅಮರವಿಜಯ ಮಠ, ಮಾಜಿ ಸಿಪಿಸಿ-1321 ರವರ ಸೇವಾ ಪುಸ್ತಕ ನಾಪತ್ತೆಯಾಗಿರುವ ವಿಷಯವು ಪೊಲೀಸ್ ಅಧೀಕ್ಷಕರ ಕಛೇರಿಯ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದಲ್ಲಿ, ಅಂತಹ ಅಪರಾಧ ಎಸಗಿದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ; | ಶ್ರೀ ಅಮರವಿಜಯ ಮಠ, ಮಾಜಿ ಸಿಪಿಸಿ-1321 ರವರ ಸೇವಾ ಪುಸ್ತಕ ನಾಪತ್ತೆಯಾಗಲು ಕಾರಣರಾದ ಈ ಹಿಂದಿನ ಡಿಇ ಶಾಖೆಯ ವಿಷಯ ನಿರ್ವಾಹಕರಾದ ಶ್ರೀ ಸುನೀಲ ವೈ. ಕಾಪ್ಸೆ, ಪ್ರದಸ, ಡಿಪಿಓ, ವಿಜಯಪುರ ರವರ ವಿರುದ್ಧ ಪೂರ್ವಭಾವಿ ವಿಚಾರಣೆ ಕೈಗೊಂಡು, ಪೂರ್ವಭಾವಿ ವಿಚಾರಣೆಯಲ್ಲಿ ಶ್ರೀ ಸುನೀಲ ವೈ. ಕಾಪ್ಸೆ, ಪ್ರದಸ, ಡಿಪಿಓ, ವಿಜಯಪುರ ರವರ ಕರ್ತವ್ಯ ಲೋಪ ಕಂಡು ಬಂದಿದ್ದರಿಂದ, ಸದರಿಯವರ ವಿರುದ್ಧ ಕೆಸಿಎಸ್ (ಸಿಸಿಎ) ನಿಯಮಾವಳಿಗಳನ್ವಯ ಇಲಾಖಾ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ. |
| ಇ) | ಇದುವರೆಗೂ ಕಡತ ನಾಪತ್ತೆ ಹಾಗೂ ದಾಖಲೆ ನಾಶಪಡಿಸಿದವರ ಮೇಲೆ ಅಪರಾಧ ಪ್ರಕರಣಗಳನ್ನು ದೂರು ದಾಖಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈಗಾಗಲೇ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಕೆಸಿಎಸ್ (ಸಿಸಿಎ) ನಿಯಮಾವಳಿಗಳನ್ವಯ ಶಿಸ್ತು ಕ್ರಮ ಪ್ರಾರಂಭಿಸಲಾಗಿದೆ. |
| ಈ) | ಅಪರಾಧ ಎಸಗಿದ ಸಿಬ್ಬಂದಿಗಳನ್ನು ಬೇರೆಯಡೆ ವರ್ಗಾಯಿಸಿ, ಅವರನ್ನು ರಕ್ಷಿಸುವ ಕ್ರಮಗಳನ್ನು ಜರುಗಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಇಲ್ಲ. |

ಸಂಖ್ಯೆ: ಹೆಚ್‌ಡಿ 47 ಪಿಸಿಕ್ಯೂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು